ಸೂಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯ ಬಂದ ಅವರುಗಳ ವಾಸಸ್ಥಳ.	ಸೊಬಲಗು.	ಮೊದಲು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
1	ಮೈಸೂರು ತಾಲ್ಲೂಕು ದ್ಯಾವಯ್ಯನ ಹುಂಡೀಲಿರುವ ಹೊನ್ನಿ	30 0 0		ಡಿಕ್ರೀ ಬಾಬತು	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ತಾರೀಖು 26ನೇ ಜುಲೈ 1887.

ಹುಣಸೂರು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತ್ಪವಜು ಕ್ರಮವಾದ ವಾರಸ್‌ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಆಗಾಯತು ಒಂದು ತಿಂಗಳಾಗಿ ಹಾಜರಾಗಿ ವಾಪಸು ಪಡಿಯಬೇಕು. ತಪ್ಪಿದಲ್ಲಿ 1887ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ವೇರಿಗೆ ನಾಶಪಡಿಸಲ್ಪಡುತ್ತೆ:—

ನಂಬರ್.	ದಸ್ತಾವೇಜನ್ನು ಬರದು ಕೊಟ್ಟವರ ಹೆಸರು ಮತ್ತು ಅಡಿಸ್.	ದಸ್ತಾವೇಜನ್ನು ಬರಿಸಿ ಕೊಂಡವರ ಹೆಸರು ಮತ್ತು ಅಡಿಸ್.	ರಿಜಿಸ್ಟ್ರೇಷನ್ಗೆ ಹಾಜರಾದ ಸಾಲಿ ತಿಂಗಳು ತಾರೀಖು.	ರಿಜಿಸ್ಟ್ರೇಷನ್ ಸಾಲಿ ತಿಂಗಳು ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
389 1884-85ನೇ ಇಸವಿ.	ಹುಣಸೂರಲ್ಲಿರುವ ಕಂದಾರೆ ಸೈದ್ ಕಿದ್ಕಿ ಸಾಬ್ ಸೈದ್ ದುರ್ವೇಷ್ ಮಗ ವ್ಯಾಪಾರ ಕಸಬು.	ಹನಗೋಡು ಗ್ರಾಮದಲ್ಲಿರುವ ಮುಸಲ್ಮಾನರ ಹೈದರ್‌ಸಾಬಿ ಮಗ ಚಿಲ್ಲರೆ ದುಕ್ಕಾದಾರ ಖಾಸಿಂಸಾಬಿ.	12—8—85	13—8—85	ಕ್ರಯಪತ್ರ ಭೂಸ್ಥಿತಿಗೆ ಸಂಬಂಧ ಪಟ್ಟದ್ದು. ಕ್ರಯದ ಮೊಖಲಗು 27 ರೂಪಾಯಿ.

ಹೆಚ್. ನಂಜುಂಡರಾಜ್ ಅರಸ್,
ಸಾರ್ ರಿಜಿಸ್ಟ್ರಾರ್.

ಮೈಸೂರು ಸಬ್ ಡಿವೀಜ್ಯ ಮುನ್‌ಸಿಫ್ ಕೋರ್ಟ್‌ನಲ್ಲಿ.

ತಾರೀಖು 21ನೇ ಜುಲೈ 1887.

1886ನೇ ಇಸವಿ ಒರಿಜನಲ್ ಮೊಕದ್ದಮೆ ನಂಬರ್ 1078.

ವಾದಿ.	ಪ್ರತಿವಾದಿ.
ಮೈಸೂರು ವೀರನಗೆರೆಯಲ್ಲಿ ಇರುವ ಪರಿವಾರದ ಜಾತಿ ಕಿದ್ದನಾಯಕನ ಮಗ ಜಮ್ಮಾನಿನಿಂದ ಜೀವಿಸುವ ಕಿದ್ದನಾಯಕ.	ವೀರನಗೆರೆಯಲ್ಲಿ ಇರುವ ಪರಿವಾರದ ಜಾತಿ ಮಾದನಾಯಕನ ಮಗ ಜಮ್ಮಾನಿನಿಂದ ಜೀವಿಸುವ ಬಡೇಸಂಜೀವನಾಯಕ.

ಸಿವಿಲ್ ಪ್ರೊಸಿಜ್ಯೂರ್ ಕೋಡ್ 30ನೇ ಸೆಕ್ಷನ್ ಮೇರೆ ಮೈಸೂರು ವಾಸಸ್ಥರಾದ ಈ ಮೊಕದ್ದಮ್ಮಾಕ್ಕೆ ಸಂಬಂಧಪಟ್ಟ ಪರಿವಾರದ ಜಾತಿ ಜನಗಳೆಲ್ಲಾ ತಿಳಿಯಪಡಿಸುವದೇನಂದರೆ—

ಮೇಲ್ಕಂಡ ವಾದಿಯು ಈ ವ್ಯಾಜ್ಯವನ್ನ ತನ್ನ ಪರವಾಗಿಯೂ ಮತ್ತು ತನ್ನ [illegible]ಮಿನವರ ಪರವಾಗಿಯೂ ದಾವಾ ದಾಖಲ್ಮಾಡಲು ಕೋರ್ಟಿನವರ ಅಪ್ಪಣೆಯನ್ನು ಪ್ರಾರ್ಥಿಸಿ ಇದ್ದಾನೆ.

ಕೆಳಗೆ ವಿವರಿಸಿಇರುವ ಚರಸ್ವತ್ತುಗಳನ್ನು ವಾದಿಯ ಸ್ವಾಧೀನಕ್ಕೆ ಸುಮಾರು 2—2½ ವರುಷಗಳ ಕೆಳಗೆ ವಾದಿಯು ಮತ್ತು ವಾದಿಯ ತರಫ಼ ಕೋಮಿನವರು ಕೇರಿ ವಪ್ಪಿಸಿದರೆಂತಲೂ ಆದರೆ ಪ್ರತಿವಾದಿಯು ಮತ್ತು ಕೋಮಿನವರ ಪೈಕಿ ಮೂರರಲ್ಲಿ ವೊಂದು ಭಾಗದವರು 3—4 ತಿಂಗಳುಗಳಿಂದ ತಮ್ಮ ಸ್ವಂತ ಜಿಂದಗಿಯಂದು ಭಾವಿಸಿ ವಾದಿಗೂ ಮತ್ತು ವಾದಿಯ ತರಫ಼ ಕೋಮಿನವರಿಗೂ ಕೊಡುವದಿಲ್ಲವೆಂದನ್ನೂ ವಾದಿ ಸಮೂದು ಮಾಡಿಧಾನೆ.

ಈ ರೀತಿ ಮೊಕದ್ದಮೆಯು ದಾಖಲಾಗಿರುತ್ತೆಂದನ್ನೂ ಮತ್ತು ಬರುವ ಆಗಸ್ಟ್ 8ನೇ ತಾರೀಖಿಗೆ ಇಷ್ಯು ತೀರ್ಮಾನದ ಬಗ್ಗೆ ಮೊಕರರ್ರಾಡಲ್ಪಟ್ಟಿರುತ್ತೆ.

ಷೆ ಡ್ಯೂ ಲ್.

ಚರಸ್ವತ್ತುಗಳು.	ರೂ.	ಆ.	ಪೈ.
ನೀರು ತುಂಬುವ ದೊಡ್ಡ ಹಂಡೆ 1ಕ್ಕೆ	30	0	0
ಯೆಸರು ಮಾಡುವ ಹಂಡೆ 4ಕ್ಕೆ	20	0	0
ಅನ್ನ ಮಾಡುವ ತಪ್ಪಲಿ 5ಕ್ಕೆ	35	0	0
ಹಿತ್ತಾಳೆ ತಪ್ಪಲೆ 3ಕ್ಕೆ	19	8	0
ತಾಂಬ್ರದ ಗಂಜು 3ಕ್ಕೆ	13	0	0
ತಾಂಬ್ರದ ಪರಾತ 1ಕ್ಕೆ	3	0	0
ಹಿತ್ತಾಳೀದು ನೀರು ಕುಡಿಯುವ ಕೊಳಗತಪ್ಪಲೆ 5ಕ್ಕೆ	5	0	0
ಶಾಸ್ತ್ರದ ಅರ್ಥನಾರಿ ಚಂಬು 5ಕ್ಕೆ	7	8	0
ಹಿತ್ತಾಳಿ ಕಳಕದ ಮಿಳ್ಳೆ 1ಕ್ಕೆ	1	0	0
ಕುಂದೀಲು ಜೋಡಿ 4ಕ್ಕೆ	12	0	0
ಛತ್ರಿ ತಿಕಸ್ತು 1ಕ್ಕೆ	4	0	0
ತಿಕಸ್ತು ಪೂದಾ ದವಾಸು ಛತ್ರಿ 1ಕ್ಕೆ	5	0	0
ಕೆಂಪು ದವಾಸು ಹೊಸ ಛತ್ರಿ 1ಕ್ಕೆ	10	0	0
ತಿಕಸ್ತು ಅಲವಾಸು ಚಳ್ಳೇ ರುಬಟಿ 1ಕ್ಕೆ	2	0	0
ದಂಡಿ ಇಲ್ಲ-ಹೊಸ ಚವರಿ ಜೋಡಿ 1ಕ್ಕೆ	1	0	0
ಚಿನಡಿ ಕೋರುರುವಾಲು 1ಕ್ಕೆ	31	0	0
ಬನಾರಸ್ ಕೋರು ಬುಟ್ಟೀದಾರಿ ದುಪ್ಪಟ್ಟಾ 1ಕ್ಕೆ	25	0	0
ಕುತ್ನಿ ಷರಾಯಿ 1ಕ್ಕೆ	8	0	0
ಹಳೇಚವರಿ ಜೋಡಿ 1ಕ್ಕೆ	2	0	0
ದೇವಸ್ಥಾನದ ಕುತ್ನಿ ನಡುಛತ್ರಿ 1ಕ್ಕೆ	10	0	0
ಕಾವೆ ಛತ್ರಿ 1ಕ್ಕೆ	8	0	0
ಚವರಿಗೆ 8ಕ್ಕೆ	48	0	0
ನಗದು ರೂಪಾಯಿ	80	0	0
ಡಾಮೇಜ್ ಬಾಬತು	20	0	0
ಜುಮ್ಲಾ ರೂಪಾಯಿ ..	400	0	0

ಎಸ್. ವೆಂಕಟವರದಯ್ಯಂಗಾರ್, ಮ್ಯೂನಿಸಿಫ್.

ಹಾಸನ ಡಿಸ್ಟ್ರಿಕ್ಟ್.

ತಾರೀಖು—ನೇ ಜುಲೈ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟಿನಲ್ಲಿರತಕ್ಕ ಕೆಲವು ಕಾಫೀ ತೋಟಗಳ ಮೇಲಿಬರ ಬೇಕಾದ ಕಂದಾಯದ ಬಾಕಿ ಅದ್ಯಾಪಿ ಪಾವತೀ ಆಗದೆ ಇರುವದರಿಂದ ಹರಾಜು ಮಾಡುವ ತಾರೀಖಿಗೆ ಹಿಂದಿನ ಅಥವಾ ಆ ತಾರೀಖು ವಳಗಾಗಿ ಸದರೀ ಕಂದಾಯ ಬಾರದೇ ಹೋದರೆ ಸ್ಟೇಟ್‌ಮೆಂಟಿನಲ್ಲಿ ನಮೂದಾಗತಕ್ಕ ಸ್ಥಳ ಮತ್ತು ತಾರೀಖುಗಳಲ್ಲಿ ಸದರೀ ಯಸ್ಟೇಟು ಗಳು ಹರಾಜು ಮಾಡಲ್ಪಡುವವು.